ಸಾರ್ವಜನಿಕರಿಗೆ 'ಅಭಿವೃದ್ಧಿ' ಎನ್ನುವುದು
ಎಲ್ಲಿಯವರೆಗೆ ಆದ್ಯತೆಯಾಗುವುದಿಲ್ಲವೋ ಅಲ್ಲಿಯವರೆಗೆ
ರಾಜಕೀಯ ವರ್ಗವು ಶಿಕ್ಷಣವನ್ನು ಅಸಡ್ಡೆಯಿಂದಲೇ
ನೋಡುವುದನ್ನು ಮುಂದುವರೆಸುತ್ತದೆ. ಗುಣಮಟ್ಟದ
ಶಿಕ್ಷಣವು ಸಾರ್ವತ್ರೀಕರಣವಾಗಬೇಕಿದ್ದು, ಅದು
ಚುನಾವಣೆಯ ಮುಖ್ಯ ವಿಷಯವೂ ಆಗಬೇಕು.

ನ್ಯಾಯೋಚಿತ ಅಧಿಕಾರಾವಧಿ

ಉನ್ನತ ಮಟ್ಟದ ಸರಕಾರಿ ಅಧಿಕಾರಿಗಳು ಹೊಂದಿರಬೇಕಾದ ಅಗತ್ಯ

ಲಾಭಾಕಾಂಕ್ಷೆಯಿಲ್ಲದೆ ಪ್ರಾಥಮಿಕ ಹಂತದ ಸಾರ್ವಜನಿಕ ಶಾಲೆಗಳ ಶಿಕ್ಷಣದ ಗುಣಮಟ್ಟ ಹಾಗೂ ಸಮತೆಯಂತಹ ಮೌಲ್ಯಗಳಿಗೆ ಸಂಬಂಧಿಸಿದಂತೆ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಗಮನವನ್ನು ಕೇಂದ್ರೀಕರಿಸಿ ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಯೊಂದರ ಮುಖ್ಯಸ್ಥರಲ್ಲೊಬ್ಬನಾಗಿ ರಾಜ್ಯ ಸರ್ಕಾರದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯೊಂದಿಗೆ ಅದರಲ್ಲಿಯೂ ನಿರ್ದಿಷ್ಟವಾಗಿ ಭಾರತೀಯ ಆಡಳಿತಾತ್ಮಕ ಸೇವೆ(ಐಎಎಸ್)ಯ ಶ್ರೇಣಿಗೆ ಸೇರಿದ ಉನ್ನತ ಮಟ್ಟದ ಅಧಿಕಾರಿಗಳೊಡನೆ ನಿಕಟವಾಗಿ ಕೆಲಸ ಮಾಡುವ ಸಂದರ್ಭ ನನಗೆ ಒದಗಿ ಬಂದಿತ್ತು.

ಕಳೆದ ದಶಕದಲ್ಲಿ ಶಿಕ್ಷಣ ಇಲಾಖೆಯಲ್ಲಿನ ಮೂರು ಅತ್ಯಂತ ಪ್ರಮುಖ ಹಾಗೂ ಉನ್ನತ ಮಟ್ಟದ ಆಡಳಿತಾತ್ಮಕ ಹುದ್ದೆಗಳಾದ ಪ್ರಧಾನ ಕಾರ್ಯದರ್ಶಿ– ಪ್ರಾಥಮಿಕ, ಪ್ರೌಢ ಮತ್ತು ವಯಸ್ಕರ ಶಿಕ್ಷಣ ಇಲಾಖೆ, ಆಯುಕ್ತರು– ಸಾರ್ವಜನಿಕ ಶಿಕ್ಷಣ ಇಲಾಖೆ, ರಾಜ್ಯ ಯೋಜನಾ ನಿರ್ದೇಶಕರು – ರಾಷ್ಟ್ರೀಯ ಮಾಧ್ಯಮಿಕ ಮತ್ತು ಸರ್ವ ಶಿಕ್ಷಣ ಅಭಿಯಾನ (ಈಗ ಸಮಗ್ರ ಶಿಕ್ಷಣ ಅಭಿಯಾನ) ಇವರುಗಳ ಅಧಿಕಾರಾವಧಿಯ ನಿಕಟ ವಿಶ್ಲೇಷಣೆಯು ಹಲವಾರು ಕುತೂಹಲಕಾರಿ ಒಳನೋಟಗಳನ್ನೊದಗಿಸುತ್ತದೆ. ಕಳೆದ ಹನ್ನೊಂದು ವರ್ಷಗಳಲ್ಲಿ, ಎಂಟು

ಕಾರ್ಯದರ್ಶಿಗಳು, ಹದಿನಾಲ್ಕು ಆಯುಕ್ತರು ಹಾಗೂ ಹದಿನೈದು ರಾಜ್ಯ ಯೋಜನಾ ನಿರ್ದೇಶಕರು ಆಗಿ ಹೋಗಿದ್ದಾರೆ. ಇದರರ್ಥ, ಅಧಿಕಾರಿಗಳು ಈ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವ ಸರಾಸರಿ ಅವಧಿಯು ಕಾರ್ಯದರ್ಶಿಗಳಿಗೆ ಒಂದು ವರ್ಷ ನಾಲ್ಕು ತಿಂಗಳು, ಆಯುಕ್ತರು ಹಾಗೂ ರಾಜ್ಯ ಯೋಜನಾ ನಿರ್ದೇಶಕರಿಗೆ ತಲಾ ಹನ್ನೊಂದು ತಿಂಗಳು ಆಗಿದೆ. ಕಾರ್ಯದರ್ಶಿಯಾಗಿ ಯಾವುದೇ ಅಧಿಕಾರಿಯು ಕಾರ್ಯ ನಿರ್ವಹಿಸಿದ ಅತಿ ದೀರ್ಘ ಅವಧಿಯು ಮೂರು ವರ್ಷ ಆರು ತಿಂಗಳು ಆಗಿದ್ದರೆ, ಇನ್ನಿಬ್ಬರ ಹುದ್ದೆಯ ವಿಷಯಕ್ಕೆ ಬಂದಾಗ ಇದು ಒಂದು ವರ್ಷ ಒಂಬತ್ತು ತಿಂಗಳಾಗಿದೆ. ಈ ಮೂರೂ ಹುದ್ದೆಗಳಲ್ಲಿ ಯಾವುದೇ ಒಂದರಲ್ಲಿ ಅಧಿಕಾರಿಯೊಬ್ಬ ಕಾರ್ಯ ನಿರ್ವಹಿಸಿದ ಅತ್ಯಂತ ಕಡಿಮೆ ಅವಧಿಯು ಕೇವಲ ಒಂದು ತಿಂಗಳು ಆಗಿದ್ದು ಇದು ಅತ್ಯಂತ ಹಾಸ್ಯಾಸ್ಪದ ಎನ್ನುವ ಮಟ್ಟದ್ದಾಗಿದೆ.

ದೀರ್ಘ ಅಧಿಕಾರಾವಧಿಯೊಂದೇ ಉತ್ತಮ ಆಡಳಿತವನ್ನು ನೀಡಬಲ್ಲದು ಎಂದು ಖಚಿತವಾಗಿ ಸಾಧಿಸಿ ತೋರಿಸಲಾಗುವುದಿಲ್ಲ. ಆದರೆ ರಾಜ್ಯದ ರಾಜಧಾನಿಯಾದ ಬೆಂಗಳೂರು ಹಾಗೂ ಈಶಾನ್ಯ ಕರ್ನಾಟಕದ ಅತ್ಯಂತ ಅವಕಾಶವಂಚಿತ ಭಾಗಗಳೂ ಸೇರಿದಂತೆ ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಕೆಲಸ ಮಾಡಿದ ನಮ್ಮ ಅನುಭವಗಳು ಹೇಳುವುದೇನೆಂದರೆ, ಉನ್ನತ ಮಟ್ಟದ ಶೈಕ್ಷಣಿಕ ಆಡಳಿತ ವ್ಯವಸ್ಥೆಯಲ್ಲಿ ಪದೇ ಪದೇ ಆಗುವ ಬದಲಾವಣೆಗಳಿಂದಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಮುಂತಾದ ನೀತಿನಿರೂಪಣಾ ದಸ್ತಾವೇಜುಗಳಲ್ಲಿ ಪ್ರತಿಪಾದಿಸಲ್ಪಟ್ಟ, ಗುಣಮಟ್ಟ ಹಾಗೂ ಸಮತೆಗೆ ಸಂಬಂಧಿಸಿದ ಧ್ಯೇಯೋದ್ದೇಶಗಳು ಈಡೇರಲು ಕನಿಷ್ಠ ನಾಲ್ಕು ಕಾರಣಗಳಿಂದಾಗಿ ತೊಡಕಾಗುತ್ತದೆ. ಈ ನಾಲ್ಕು ಕಾರಣಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.

1 ಶಿಕ್ಷಣ ಇಲಾಖೆಯು ರಾಜ್ಯದಲ್ಲಿನ ಸರ್ಕಾರಿ ಇಲಾಖೆಗಳಲ್ಲಿಯೇ ಅತ್ಯಂತ ದೊಡ್ಡ ಹಾಗೂ ಸಂಕೀರ್ಣ ಇಲಾಖೆಯಾಗಿದ್ದು, ಅತ್ಯಂತ ಬುದ್ಧಿವಂತ ಅಧಿಕಾರಿಗೂ ಕೂಡ ಇಲಾಖೆಯ ಚಟುವಟಿಕೆಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳ ಗಾತ್ರ ಹಾಗೂ ವ್ಯಾಪಕತೆಯನ್ನು ಅರ್ಥ ಮಾಡಿಕೊಳ್ಳಲು ಕನಿಷ್ಠ ಆರು ತಿಂಗಳುಗಳ ಸಮಯ ಬೇಕಾಗುತ್ತದೆ. ತಮ್ಮ ಕೆಲಸಕಾರ್ಯಗಳಿಗೆ ಬೆಂಬಲವಾಗಿ ನಿಲ್ಲುವ ಎರಡನೆಯ ಹಂತದ ಅಧಿಕಾರಿಗಳು ಹಾಗೂ ತಮ್ಮ ಜೊತೆಗೆ ಕೆಲಸ ಮಾಡುವ ಇನ್ನಿತರ ಸಿಬ್ಬಂದಿ ವರ್ಗದ ಪರಿಚಯವನ್ನು ಸಾಕಷ್ಟು ಚೆನ್ನಾಗಿಯೇ ಮಾಡಿಕೊಳ್ಳಬೇಕಾಗುತ್ತದೆ. ಈ ಎಲ್ಲ

ವಿಷಯಗಳ ಬಗ್ಗೆ ಸ್ವ-ಅರಿವನ್ನು ಮೂಡಿಸಿಕೊಳ್ಳುವುದರ ಜೊತೆಗೆ, ತಾವು ಪರಿಹರಿಸಬೇಕಾದ ಪ್ರಮುಖ ಸಮಸ್ಯೆಗಳ ಆದ್ಯತೆಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಕಚೇರಿಯ ಸಿಬ್ಬಂದಿಗಳೂ ಕೂಡ ಇವರ ಕಾರ್ಯವೈಖರಿ ಹಾಗೂ ಗತಿಗೆ ಒಗ್ಗಿಕೊಳ್ಳಬೇಕಾಗುತ್ತದೆ. ಇಡೀ ಆಡಳಿತ ಯಂತ್ರವು ಸಂವೇದನಾಶೀಲತೆಯನ್ನು ಹಾಗೂ ಧನಾತ್ಮಕ ಕಾಯಕ-ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಪ್ರಬಲ ಹಾಗೂ ಮಾರ್ಗದರ್ಶಕ ನಾಯಕತ್ವದ ಜೊತೆಗೆ ಬದ್ಧ, ಪ್ರೇರಿತ ಹಾಗೂ ಸ್ಪಂದನಶೀಲ ತಂಡವಿದ್ದಾಗ ಮಾತ್ರ ಇದು ಸಾಧ್ಯ. ಸಮರ್ಪಣಾ ಭಾವವಿರುವ ಇಂತಹ ತಂಡ ಕಟ್ಟಲು ಸಾಕಷ್ಟು ಸಮಯ ಹಿಡಿಯುತ್ತದೆ.

2 ಕಾರ್ಯಕ್ಷೇತ್ರದಲ್ಲಿ ಏನಾಗುತ್ತಿದೆ ಎಂಬುದನ್ನು ವಾಸ್ತವಿಕ ನೆಲೆಯಲ್ಲಿ ಅರ್ಥೈಸಿಕೊಳ್ಳಲು ಈ ಅಧಿಕಾರಿಗಳಿಗೆ ಸಾಧ್ಯವಾಗಬೇಕು. ಇಲಾಖೆಯ ಸಮಸ್ಯೆಗಳು ಹಾಗೂ ಸವಾಲುಗಳ ಕುರಿತು ತಮ್ಮ ಕೈಕೆಳಗಿನ ಎರಡನೆಯ ಹಂತದ ಅಧಿಕಾರಿಗಳಿಂದ ತಿಳಿದುಕೊಂಡರಷ್ಟೇ ಸಾಕಾಗುವುದಿಲ್ಲ. ತಾವೇ ಜಿಲ್ಲೆಗಳಲ್ಲಿ ಓಡಾಡಿ ಶಾಲೆಗಳಿಗೆ ಭೇಟಿಯಿತ್ತು ಅಲ್ಲಿನ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆ, ಮಕ್ಕಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿ, ಶಿಕ್ಷಕರು ಎದುರಿಸುತ್ತಿರುವ ಸವಾಲುಗಳು, ಪಾಲಕರು ಮತ್ತು ಇನ್ನಿತರ ಭಾಗೀದಾರರ ನಿರೀಕ್ಷೆಗಳು, ಶಾಲಾ ಅಭಿವೃದ್ಧಿ ಉಸ್ತುವಾರಿ ಸಮಿತಿ ಮತ್ತು ಒಟ್ಟಾರೆ ಸಮುದಾಯದ ಪಾತ್ರಗಳನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ಸಮಯವನ್ನು ತೊಡಗಿಸಬೇಕಾಗುತ್ತದೆ. ಮಕ್ಕಳ ಕಲಿಕೆಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸುವಲ್ಲಿ ಶಿಕ್ಷಕರು ಮತ್ತು ಪೋಷಕರ ಅಗತ್ಯಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಎಷ್ಟರ ಮಟ್ಟಿಗೆ ಸ್ಪಂದಿಸುತ್ತಿದ್ದಾರೆ ಎಂಬುದರ ಬಗ್ಗೆಯೂ ಇಂತಹ ಭೇಟಿಗಳು ಅವರಿಗೆ ನೇರ ಅರಿವನ್ನು ಮೂಡಿಸುತ್ತವೆ.

3 ಇಲಾಖೆಯಲ್ಲಿಯೇ ಲಭ್ಯವಿರುವ ಒಟ್ಟಾರೆ ಶಕ್ತಿಯನ್ನು, ಅದರಲ್ಲಿಯೂ ಜನರ ಸಾಮರ್ಥ್ಯಗಳನ್ನು ಅವರು ಅಳೆಯಬೇಕಾಗುತ್ತದೆ. ಅಲ್ಲದೆ ಹೊರಗಿನ ಯಾವ ವ್ಯಕ್ತಿಗಳು ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳು ಇಲಾಖೆಗೆ ಸಹಯೋಗ ನೀಡುತ್ತಿವೆ ಮತ್ತು ಇನ್ನಿತರ ಯಾವ ತಜ್ಞರಿಂದ ಯಾವ ಬಗೆಯ ನೆರವನ್ನು ಪಡೆಯುವ ಅಗತ್ಯವಿದೆ ಎಂಬುದನ್ನೂ ತಿಳಿದುಕೊಂಡಿರಬೇಕಾಗುತ್ತದೆ. ತಮ್ಮ ವ್ಯಾಪ್ತಿಯಲ್ಲಿ ಲಭ್ಯವಿರುವ ಎಲ್ಲ ಬಗೆಯ ಸಂಪನ್ಮೂಲಗಳ ಬಗ್ಗೆ ಅರ್ಥಪೂರ್ಣ ಚಿತ್ರಣವನ್ನು ಮೂಡಿಸಿಕೊಳ್ಳಬೇಕಾಗುತ್ತದೆ. ಯೋಜನೆಗಳ ಚಾಲನೆಗೆ

ಸ್ಪಷ್ಟ ದಿಕ್ಕನ್ನು ರೂಪಿಸಲು ಹಾಗೂ ಸಮರ್ಪಕ ರೀತಿಯಲ್ಲಿ ಅವುಗಳನ್ನು ಕಾರ್ಯಗತಗೊಳಿಸಲು ಇದರಿಂದ ಬಹಳ ಅನುಕೂಲವಾಗುತ್ತದೆ.

4 ಇವು ಸಾರ್ವಜನಿಕ ಕ್ಷೇತ್ರದ ಹುದ್ದೆಗಳಾದ್ದರಿಂದ ಅಧಿಕಾರಿಗಳು ತಮಗೆ ಸಂಬಂಧಪಟ್ಟ, ರಾಜಕೀಯ ಮೇಲಧಿಕಾರ ಹೊಂದಿರುವ ಚುನಾಯಿತ ಪ್ರತಿನಿಧಿಗಳೊಂದಿಗೆ ನಿರಂತರ ಸಂಪರ್ಕವಿರಿಸಿಕೊಳ್ಳಬೇಕಾಗುತ್ತದೆ. ಸಂಬಂಧಿಸಿದ ಸಚಿವರೊಂದಿಗೆ ನಿಕಟವಾಗಿ ಕಾರ್ಯ ನಿರ್ವಹಿಸ ಬೇಕಾಗುತ್ತದೆ. ಅಲ್ಲದೇ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು, ಲೋಕಸಭಾ ಸದಸ್ಯರು, ವಿರೋಧ ಪಕ್ಷದ ಮುಖಂಡರುಗಳ ಜೊತೆ ಹಾಗೂ ಇನ್ನಿತರ ಜನಪ್ರತಿನಿಧಿಗಳೊಡನೆ ಒಡನಾಡಬೇಕಾಗುತ್ತದೆ. ಸಾರ್ವಜನಿಕರು, ಮಾಧ್ಯಮ ಪ್ರತಿನಿಧಿಗಳು ಹಾಗೂ ಪೌರ ಸಂಘಟನೆಗಳ ಜೊತೆಗೆ ಕೂಡ ಅವರು ಆಗಿಂದಾಗ್ಗೆ ವ್ಯವಹರಿಸಬೇಕಾಗುತ್ತದೆ. ಹೀಗೆ ರಾಜಕಾರಣಿಗಳೊಂದಿಗೆ ವ್ಯವಹರಿಸುವಾಗ ಸರಿಯಾದ ರೀತಿಯ ಸಂಬಂಧವನ್ನಿರಿಸಿಕೊಂಡು ತಟಸ್ಥ ಧೋರಣೆಯಿಂದ ನಿರ್ಭಯವಾಗಿ, ಯಾವುದೇ ಆಮಿಷಗಳಿಗೆ ಬಲಿಯಾಗದೆ ನಿಷ್ಪಕ್ಷಪಾತ ರೀತಿಯಲ್ಲಿ ಕಾರ್ಯನಿರ್ವಹಿಸುವರೆಂಬ ನಿರೀಕ್ಷೆಯನ್ನು ಈ ಅಧಿಕಾರಿಗಳ ಮೇಲಿರಿಸಲಾಗುತ್ತದೆ. ಅವರು ಸಾರ್ವಜನಿಕರಿಗೆ, ನಾಗರಿಕ ಸಂಘಟನೆಗಳಿಗೆ ಹಾಗೂ ಮಾಧ್ಯಮಗಳಿಗೆ ಸಮರ್ಪಕವಾದ ವೇಳೆಯನ್ನು ಮೀಸಲಿರಿಸಬೇಕಾಗಿದ್ದು, ತಮ್ಮನ್ನು ಸಂಪರ್ಕಿಸಲು ಬರುವವರಿಗೆ ತಮ್ಮ ಕಚೇರಿಯಲ್ಲಿ ಮುಕ್ತ ವಾತಾವರಣವನ್ನು ನಿರ್ಮಿಸಬೇಕಾಗುತ್ತದೆ. ಇದನ್ನು ಜಾರಿಗೊಳಿಸಲು ಸೂಕ್ತ ವ್ಯವಸ್ಥೆಯನ್ನು ಅವರು ಅಳವಡಿಸಬೇಕಾಗಿದ್ದು ಅದಕ್ಕೆ ತಕ್ಕ ಸಮಯವನ್ನು ನೀಡಬೇಕಾಗುತ್ತದೆ.

ಮೇಲಿನ ಅಂಕಿ-ಅಂಶಗಳೇ ಸಾರುವಂತೆ ಎಲ್ಲವನ್ನೂ ಕ್ರಮಬದ್ಧಗೊಳಿಸಲು ಬೇಕಾದ ಕನಿಷ್ಠ ಸಮಯವನ್ನೂ ಅಧಿಕಾರಿಗಳಿಗೆ ನೀಡದೆ ಅವರನ್ನು ಪದೇ ಪದೇ ವರ್ಗಾವಣೆಗೆ ಗುರಿಪಡಿಸಲಾಗುತ್ತದೆ. ಇಂತಹ ಗೊತ್ತುಗುರಿಯಿಲ್ಲದ ಬದಲಾವಣೆಗಳಿಗೆ ಬಹಳಷ್ಟು ಬಾರಿ ಅಭಿವೃದ್ಧಿಗೆ ಸಂಬಂಧಿಸಿರದ ಕಾರಣಗಳೇ ಇರುತ್ತವೆ. ಉದಾಹರಣೆಗೆ, ಇನ್ನಿತರ ಪ್ರಬಲ ಸಚಿವಾಲಯಗಳಲ್ಲಿನ ಹುದ್ದೆಗಳಿಗೆ ಹೋಲಿಸಿದರೆ ಈ ಹುದ್ದೆಗಳು ಹೆಚ್ಚು ಅಪೇಕ್ಷಣೀಯವಲ್ಲ, ಅಷ್ಟು ಆಕರ್ಷಕವಲ್ಲವೆಂಬ ಭಾವನೆ ಅಥವಾ ಸ್ವಜನ ಪಕ್ಷಪಾತವು ಕಾರಣವಾಗಬಹುದು. ಬದ್ಧತೆಯನ್ನು ಹೊಂದಿರುವ ಅಧಿಕಾರಿಗಳನ್ನು ಇನ್ನಿತರ ಪ್ರಮುಖ ಇಲಾಖೆಗಳಿಗೆ ನಿಯೋಜಿಸಬಹುದು. ಅಧಿಕಾರಿಗಳಲ್ಲಿ ಅನೇಕರು ಕೆಲವು ಕಾಲ ಕೇಂದ್ರ ಸರ್ಕಾರದ

ಇಲಾಖೆಗಳಲ್ಲೊಂದರಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಆದ್ಯತೆ ವ್ಯಕ್ತಪಡಿಸಬಹುದು. ಹೀಗೆ ಈ ಕಾರಣಗಳ ವ್ಯಾಪ್ತಿ ದೊಡ್ಡದು.

ಒಟ್ಟಾರೆ ಸಾರ್ವಜನಿಕರಿಗೆ 'ಅಭಿವೃದ್ಧಿ' ಎನ್ನುವುದು ಎಲ್ಲಿಯವರೆಗೆ ಆದ್ಯತೆಯಾಗುವುದಿಲ್ಲವೋ ಅಲ್ಲಿಯವರೆಗೆ ರಾಜಕೀಯ ವರ್ಗವು ಶಿಕ್ಷಣವನ್ನು ಅಸಡ್ಡೆಯಿಂದಲೇ ನೋಡುವುದನ್ನು ಮುಂದುವರೆಸುತ್ತದೆ (ಒಳ್ಳೆಯ ಉದ್ದೇಶವನ್ನು ಹೊಂದಿದ್ದು ಶಿಕ್ಷಣದ ಧ್ಯೇಯೋದ್ದೇಶಗಳಿಗೆ ಬದ್ಧರಾಗಿದ್ದರೂ ಈಗಿರುವ ಶಿಕ್ಷಣ ಸಚಿವರಿಗೆ ಸಂಪುಟದಲ್ಲಿ ಕೇವಲ ರಾಜ್ಯ ಸಚಿವ ದರ್ಜೆಯ ಸ್ಥಾನವನ್ನು ನೀಡಿರುವುದನ್ನು ನೋಡಿದರೆ ಅದು ಕೇವಲ ಕಾಕತಾಳೀಯ ಎನ್ನಲಾಗದು). ವಾರ್ಷಿಕ ಮುಂಗಡಪತ್ರದಲ್ಲಿ ಶಿಕ್ಷಣಕ್ಕಾಗಿ ಅತ್ಯಲ್ಪ ಮೊತ್ತವನ್ನು ನಿಗದಿ ಪಡಿಸುವುದು, ಅಧಿಕಾರಿಗಳನ್ನು ಪದೇಪದೇ ಬದಲಾಯಿಸುವುದು ಇವು ಪರಿಹರಿಸಬೇಕಾದ ದೊಡ್ಡ ಅಸ್ವಸ್ಥತೆಯ ರೋಗಲಕ್ಷಣಗಳಲ್ಲಿ ಕೆಲವಷ್ಟೇ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಎಲ್ಲ ಮಕ್ಕಳಿಗೂ ಲಭ್ಯವಾಗುವ ಹಾಗೆ ಗುಣಮಟ್ಟದ ಶಿಕ್ಷಣವು ಸಾರ್ವತ್ರೀಕರಣವಾಗಬೇಕಿದ್ದು ಅದು ಚುನಾವಣೆಯ ಮುಖ್ಯ ವಿಷಯವೂ ಆಗಬೇಕು. ಇಲ್ಲದಿದ್ದರೆ, ಶಿಕ್ಷಣ ಇಲಾಖೆಯನ್ನು ಅಸಡ್ಡೆಯಿಂದ ನೋಡುವ ಸದ್ಯದ ಪರಿಪಾಠವು ಅನಿವಾರ್ಯವಾಗಿ ಮುಂದುವರೆಯುತ್ತದೆ.

ಮುಂಬರುವ ದಿನಗಳಲ್ಲಿ ಶಿಕ್ಷಣಕ್ಕೆ ಸಲ್ಲಬೇಕಾದ ಪಾಲನ್ನು ಯಥಾಯೋಗ್ಯವಾಗಿ ನೀಡುವಂತೆ ನೀತಿನಿರೂಪಕರ ಮೇಲೆ ಸಾಕಷ್ಟು ಒತ್ತಡವನ್ನು ತರಲು ಸಾಧ್ಯವಾಗುವುದೆಂದು ಆಶಿಸೋಣ. ಅದರಲ್ಲಿಯೂ ವಿಶೇಷವಾಗಿ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟಗಳೆರಡರಲ್ಲಿಯೂ ರೂಪುಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯ ಇಂದಿನ ಸಂದರ್ಭದಲ್ಲಿ, ಮುಂಬರುವ ದಶಕದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯ ಸಮಕ್ಕೆ ಏರಿಸುವುದಕ್ಕಾಗಿ ಸರ್ಕಾರಗಳು ಮಾನವ ಬಂಡವಾಳದ ಮೇಲೆ ಹೆಚ್ಚಿನ ಹೂಡಿಕೆಯನ್ನು ಮಾಡುತ್ತವೆ ಎಂಬ ಬಹುದೊಡ್ಡ ನಿರೀಕ್ಷೆಯಿದೆ. ಶಿಕ್ಷಣದ ಹಕ್ಕು ಕಾಯಿದೆ ಮತ್ತು ಇತ್ತೀಚೆಗೆ ವಿಶ್ವಸಂಸ್ಥೆಯಿಂದ ಅಂಗೀಕರಿಸಲ್ಪಟ್ಟ ಸುಸ್ಥಿರ ಅಭಿವೃದ್ಧಿ ಧ್ಯೇಯೋದ್ದೇಶಗಳೆರಡೂ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಎಂಟು ವರ್ಷಗಳವರೆಗೆ ಕೊಡುವ ಭರವಸೆಯನ್ನು ನೀಡುತ್ತವೆ. ಆದರೆ ಇವೆರಡರ ಗುರಿಯನ್ನೂ ಮೀರಿ, ಎಲ್ಲಾ ಮಕ್ಕಳಿಗೂ ಹನ್ನೆರಡು ವರ್ಷಗಳ ಅವಧಿಯ ಗುಣಮಟ್ಟದ ಶಾಲಾ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿ ತನ್ನ ಬದ್ಧತೆಯನ್ನು ಮೆರೆಯುವ ಮೂಲಕ ಕರ್ನಾಟಕವು ದೇಶದಲ್ಲಿಯೇ ಮಾದರಿ ರಾಜ್ಯವಾಗಲು ಇದು ಸೂಕ್ತ ಸಮಯ.

■ ಬಿ ಫಸ್ಟ್, 18–03–2016